KARC310000862025

<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಲಿಂಗಸುಗೂರು.</u>

**ಉಪಸ್ಥಿತರು: ಶ್ರೀ. ಸಿದ್ರಾಮ ರೆಡ್ಡಿ,**

**ಬಿ.ಎ.ಎಲ್.ಎಲ್.ಬಿ**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಲಿಂಗಸುಗೂರು.**

**ದಿನಾಂಕಃ 25 ನೇ ಜೂನ್ 2026**

**<u>ಕ್ರಿ.ಮಿಸ್. ನಂಃ 09/2025</u>**

**ಅರ್ಜಿದಾರರು** : 1. ರಾಜಾಬೀ ಗಂಡ ಮುಬಾರಕ್ ಕಡ್ಲಿಮಟ್ಟಿ,
ವಯಾ 27 ವರ್ಷ, ಉದ್ಯೋಗಃ ಮನೆಗೆಲಸ,
ಸಾಃಮುದಗಲ್,
ತಾಃ ಲಿಂಗಸುಗೂರು, ಜಿಃ ರಾಯಚೂರು.

**(ಪ್ರತಿನಿಧಿಸುವವರುಃ ಶ್ರೀ.ಕೆ.ಬಿ.ಎಮ್.ವಕೀಲರು)**

- **ವಿರುದ್ಧ** -

**ಎದುರುದಾರರು** :1) ಮುಬಾರಕ್ ಕಡ್ಲಿಮಟ್ಟಿ ತಂದೆ ಕಬೀರ ಸಾಬ್ ಕಡ್ಲಿಮಟ್ಟಿ,
ವಯಾಃ 37 ವರ್ಷ, ಉದ್ಯೋಗಃ ಚಾಲಕ ಹಾಗೂ ವ್ಯಾಪಾರ,
ಸಾಃ 1ನೇ ಕ್ರಾಸ್ ನೆಹೆರು ನಗರ ಸಾದತ್ ಕಾಲೋನಿ , ಟಿ.ಕೆ. ರಸ್ತೆ ಭದ್ರಾವತಿ,
ತಾಃಭದ್ರಾವತಿ, ಜಿಃಶಿವಮೊಗ್ಗ,
ಮೋಃಸಂ.8317400337/9900734747.

2) ಮಮ್ತಾಜ್ ಬೇಗಂ ಗಂಡ ದಿ. ಕಬೀರ ಸಾಬ,
ವಯಾಃ 56 ವರ್ಷ, ಉದ್ಯೋಗಃ ಮನೆಕೆಲಸ,
ಸಾಃ 1ನೇ ಕ್ರಾಸ್ ನೆಹೆರು ನಗರ ಸಾದತ್ ಕಾಲೋನಿ, ಟಿ.ಕೆ. ರಸ್ತೆ ಭದ್ರಾವತಿ,
ತಾಃಭದ್ರಾವತಿ, ಜಿಃಶಿವಮೊಗ್ಗ,
ಮೋಃಸಂ.9900734747.

3) ಮಹೆಬೂಬ ಸಾಬ್ ತಂದೆ ಕಬೀರ ಸಾಬ್ ಕಡ್ಲಿಮಟ್ಟಿ,
ವಯಾಃ 36 ವರ್ಷ, ಉದ್ಯೋಗಃ ಚಾಲಕ ಹಾಗೂ ವ್ಯಾಪಾರ,
ಸಾಃ 1ನೇ ಕ್ರಾಸ್ ನೆಹರು ನಗರ ಸಾದತ್ ಕಾಲೋನಿ , ಟಿ.ಕೆ. ರಸ್ತೆ
ಭದ್ರಾವತಿ,
ತಾಃಭದ್ರಾವತಿ, ಜಿಃಶಿವಮೊಗ್ಗ,
ಮೋಃಸಂ.8867388748.

4) ನಜೀರ ಸಾಬ ತಂದೆ ಕಬೀರ ಸಾಬ್ ಕಡ್ಲಿಮಟ್ಟಿ,
ವಯಾಃ 39 ವರ್ಷ, ಉದ್ಯೋಗಃ ಚಾಲಕ ಹಾಗೂ ವ್ಯಾಪಾರ,
ಸಾಃ 1ನೇ ಕ್ರಾಸ್ ನೆಹರು ನಗರ ಸಾದತ್ ಕಾಲೋನಿ , ಟಿ.ಕೆ. ರಸ್ತೆ
ಭದ್ರಾವತಿ,
ತಾಃಭದ್ರಾವತಿ, ಜಿಃಶಿವಮೊಗ್ಗ,
ಮೋಃಸಂ.9739977866.

**(ಪ್ರತಿನಿಧಿಸುವವರುಃ ಶ್ರೀ.ಎಸ್.ಹೆಚ್.ಎಸ್. ವಕೀಲರು)**

**ಆದೇಶ**

ಕೌಟುಂಬಿಕ ಹಿಂಸೆಯಿಂದ ಮಹಿಳೆಯ ಸಂರಕ್ಷಣಾ ಅಧಿನಿಯಮ 2005 ಕಲಂ 12ರ ರೀತಿಯ ಅರ್ಜಿಯನ್ನು ಸಲ್ಲಿಸಿ, ಕಲಂ 18 ರಡಿಯಲ್ಲಿ ರಕ್ಷಣ ಅದೇಶ, ಕಲಂ 19 ರಡಿಯಲ್ಲಿ ಅರ್ಜಿದಾರಿರರಿಗೆ ಪ್ರತ್ಯೇಕ ವಾಸ ಮನೆ ಕಲ್ಪಿಸಿ ಕೊಡುವಂತೆ ಮತ್ತು ಕಲಂ.20 ರಡಿಯಲ್ಲಿ ಅರ್ಜಿದಾರರಿಗೆ ಮಾಸಿಕ ತಲಾ 10,000/- ರೂಗಳಂತೆ ಜೀವನಾಂಶವನ್ನು ತುಂಬಿಕೊಡಲು, ಎದುರುದಾರರಿಗೆ ಆದೇಶ ಮಾಡಬೇಕೆಂದು ಕೋರಿರುತ್ತಾರೆ.

**2. ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ಸಾರಾಂಶಃ**

ಅರ್ಜಿದಾರರಿಗೆ ಎದರುದಾರ ಸಂ. 1 ರವರು ಗಂಡನಾಗ ಬೇಕು, ಆರ್ಜಿದಾರ ಮತ್ತು ಎದರುದಾರ ಸಂ. 1 ರವರ ಮದುವೆಯು ದಿನಾಂಕ : 21-07-2022 ರಂದು ಇಸ್ಲಾಮ ಧರ್ಮದ ಪ್ರಕಾರ ಅರ್ಜಿದಾರಳ ಮನೆಯ ಹತ್ತಿರ ನೆರವೇರಿದ್ದು, ಎದರುದಾರ ಸಂ. 2 ರಿಂದ 4 ರವರು ಎದರುದಾರನ ತಾಯಿ ಆತನ, ಸಹೋದರರು ಆಗಿರುತ್ತಾರೆ. ಅರ್ಜಿದಾರ ಮತ್ತು ಎದರುದಾರ ಸಂ.1 ರವರ ಮದುವೆಯ ಸಮಯದಲ್ಲಿ ಎದರುದಾರನಿಗೆ ಅರ್ಜಿದಾರರ ಮನೆಯವರು ರೂ. 50,000/- ನಗದು ವರದಕ್ಷಿಣೆ, 3 ತೊಲೆ ಬಂಗಾರ, ವರನ ಬಟ್ಟೆಗಳಿಗಾಗಿ ರೂ. 10,000/- ನಗದು ಹಾಗೂ ರೂ. 2,00,000/-

ಬೆಲೆಬಾಳುವ ಗೃಹಬಳಕೆಯ ಎಲ್ಲಾ ಸಾಮಾನುಗಳನ್ನು ಕೊಟ್ಟು ಎದರುದಾರರ ಒಪ್ಪಿಗೆಯಂತೆ ವಿಜೃಂಭಣೆಯಿಂದ ಮದುವೆಯನ್ನು ಮಾಡಿರುತ್ತಾರೆ. ಅವರಿಬ್ಬರ ವೈವಾಹಿಕ ಜೀವನದಿಂದ ಅವರಿಗೆ ಯಾವುದೇ ಸಂತಾನ ಇರುವುದಿಲ್ಲಾ. ಅರ್ಜಿದಾರಳನ್ನು ಎದರುದಾರ ಸಂ.1 ರವರು ಮದುವೆಯಾದ ನಂತರ, ಎದರುದಾರರೆಲ್ಲಾ ಸೇರಿಕೊಂಡು ಅರ್ಜಿದಾರಳಿಗೆ ಹಲವಾರು ರೀತಿಯ ಮಾನಸಿಕ ಹಾಗೂ ದೈಹಿಕ ತೊಂದರೆಯನ್ನು ಕೊಡುತ್ತಿದ್ದರೂ ಕೂಡ ಸಹಿಸಿ ಕೊಂಡಿದ್ದಳು. ಎದರುದಾರರು ರೂ. 5,00,000/- ವರದಕ್ಷಿಣೆಗಾಗಿ ಅರ್ಜಿದಾರಳನ್ನು ಪೀಡಿಸುತ್ತಾ ಬಂದಿರುತ್ತಾರೆ. ಅರ್ಜಿದಾರಳನ್ನು ಮದುವೆಯಾದ ನಂತರದಲ್ಲಿ 1ನೇ ಎದುರುದಾರ ರವರು ಅರ್ಜಿದಾರಳನ್ನು ತನ್ನ ಮನೆಗೆ ಕರೆದು ಕೊಂಡು ಹೋಗಿ ಸುಮಾರು 2 ವಾರ ಸರಿಯಾಗಿ ನೋಡಿಕೊಂಡಿದ್ದು ನಂತರದಲ್ಲಿ ವರದಕ್ಷಿಣೆಗಾಗಿ ಮೇಲೆ ತೋರಿಸಿರುವ ಎದರುದಾರರೆಲ್ಲಾ ಸೇರಿ ಅರ್ಜಿದಾರಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿರುತ್ತಾರೆ. ಅರ್ಜಿದಾರಳು ಎದರುದಾರರ ಕಿರುಕುಳವನ್ನು ಎಷ್ಟು ತಾಳಿಕೊಂಡರೂ ಅವರು ಹೊಂದಿಕೊಳ್ಳದ ಕಾರಣ ತಮ್ಮ ಮನೆಯವರಿಗೆ ಫೋನಿನ ಮೂಲಕ ಇದ್ದ ವಿಷಯವನ್ನು ತಿಳಿಸಲಾಗಿ ನಂತರದಲ್ಲಿ 1ನೇ ಎದರುದಾರ ಹಾಗೂ ಅವರ ಸಹೋದರರು ಬಂದು ಸೆಪ್ಟೆಂಬರ 2022 ಅರ್ಜಿದಾರಳನ್ನು ನೀನು ಸ್ವಲ್ಪ ದಿನ ನಿನ್ನ ತವರು ಮನೆಗೆ ಹೋಗಿ ಬಾ ಎಂದು ಒತ್ತಾಯ ಪೂರಕವಾಗಿ ಕಳುಹಿಸಿರುತ್ತಾರೆ. ನಂತರದಲ್ಲಿ 1ನೇ ಎದರುದಾರ ಅರ್ಜಿದಾರಳನ್ನು ಕರೆದುಕೊಂಡು ಹೋಗಲು ಇಂದು ಬರುವೆ ನಾಳೆ ಬರುವೆ ಎನ್ನುತ್ತಾ ದಿನಕಳೆಯುತ್ತಿದ್ದು ಇಂದಿಗೂ ಬಂದಿರುವುದಿಲ್ಲಾ. ಅರ್ಜಿದಾರರು ಈಗ ಸದ್ಯಕ್ಕೆ ತನ್ನ ಅಣ್ಣನ ಮನೆಯಲ್ಲಿಯೇ ವಾಸವಾಗಿದ್ದು ಅರ್ಜಿದಾರರನ್ನು ಸಾಕಿ ಸಲಹುವ ಅರ್ಹತೆ ಅರ್ಜಿದಾರರ ಅಣ್ಣ ಹಾಗೂ ತಾಯಿಗೆ ಇರುವುದಿಲ್ಲಾ. ಅರ್ಜಿದಾರರು ಲಿಂಗಸಗೂರು ತಾಲೂಕಿನ ಮುದಗಲ್ ನಲ್ಲಿ ತನ್ನ ಅಣ್ಣನ ಮನೆಯಲ್ಲಿ ವಾಸವಾಗಿದ್ದು ಮಾನ್ಯ ನ್ಯಾಯಾಲಯಕ್ಕೆ ಅರ್ಜಿದಾರರ ಈ ಅರ್ಜಿಯನ್ನು ವಿಚಾರಿಸುವ ಅಧಿಕಾರವಿರುತ್ತದೆ. ಆದ್ದರಿಂದ ನ್ಯಾಯಾಲಯಕ್ಕೆ ತಾವು ಕೇಳಿರುವ ಪರಿಹಾರಗಳನ್ನು ಒದಗಿಸಬೇಕೆಂದು ಕೇಳಿಕೊಂಡಿರುತ್ತಾರೆ.

**3.** ಎದುರುದಾರರು ತಮ್ಮ ವಕೀಲರ ಮುಖಾಂತರ ಹಾಜರಾಗಿ, ತಕರಾರು ಸಲ್ಲಿಸಿ, ತಮ್ಮ ತಕರಾರಿನಲ್ಲಿ ಹೇಳಿರುವುದೇನೆಂದರೆ, ಎದುರುದಾರನಿಗೆ ವಿನಾಕಾರಣ ಮಾನಸಿಕ ಕಿರುಕುಳ ಕೊಡುವ ದುರುದ್ದೇಶದಿಂದ, ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲು ಯೋಗ್ಯವಾಗಿರುತ್ತದೆ. ಎದುರದಾರನು ನಿರುದ್ಯೋಗಿಯಾಗಿದ್ದು, ಆತನಿಗೆ ಯಾವುದೇ ಆದಾಯ

ಮೂಲಗಳಿರುವದಿಲ್ಲ. ಎದುರುದಾರನಿಗೆ ಯಾವುದೇ ಉದ್ಯೋಗವಿಲ್ಲವೆಂದು ಗೊತ್ತಿದ್ದರೂ ಸಹ ಅರ್ಜಿದಾಳು ತನ್ನ ದುಡುಮೆಯಿಂದ ಎದುರುದಾರನನ್ನು ಸಾಕಿಸಲುಹುತ್ತೇನೆಂದು ಹೇಳಿ ಈ ಎದುರುದಾರನನ್ನು ಮದುವೆಯಾಗಿರುತ್ತಾಳೆ. ಅರ್ಜಿದಾರಳು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತೇನೆಂದು ಭರವಸೆಯ ಮೇಲೆ ಎದುರುದಾರನನ್ನು ವಿವಾಹವಾಗಿದ್ದು ಎರಡು ತಿಂಗಳ ನಂತರ ತನ್ನ ನಡವಳಿಕೆಯನ್ನು ಬದಲಾಯಿಸಿಕೊಂಡು, ಎದುರುದಾರನಿಗೆ ವಿನಾಕಾರಣ ಮಾನಸಿಕ ಕಿರಕುಳ ಎದುರುದಾರನಿಗೆ ಮಾನಸಿಕ ಕಿರುಕುಳ ನೀಡುತ್ತಾ ಬಂದಿರುತ್ತಾಳೆ. ಅರ್ಜಿದಾರಳು ಮಾನ್ಯ ನ್ಯಾಯಾಲಯಕ್ಕೆ ತನ್ನ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಸಂಬಂಧಪಟ್ಟ ಮಹಿಳಾ ಮತ್ತು ಮಕ್ಕಳ ಇಲಾಖೆಗೆ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಅಧಿನಿಯಮ ಕಲಂ.12 (1) ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗಿತ್ತು. ಆದರೇ, ಸದರಿ ಅರ್ಜಿದಾರಳು ಯಾವುದೇ ನಿಯಮಗಳನ್ನು ಪಾಲನೆ ಮಾಡದೇ, ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಜಾ ಮಾಡುವದಕ್ಕೆ ಯೋಗ್ಯವಾಗಿರುತ್ತದೆ. ಅರ್ಜಿದಾರಳು ಸಿರವಾರ ತಾಲೂಕಿನ, ಕವಿತಾಳ ಗ್ರಾಮದಲ್ಲಿ ವಾಸಿಸುತ್ತಿದ್ದು, ಲಿಂಗಸುಗೂರು ನ್ಯಾಯಾಲಯಕ್ಕೆ ಈ ಅರ್ಜಿಯನ್ನು ಸಲ್ಲಿಸುವ ದುರುದ್ದೇಶದಿಂದ ಮುದಗಲ್ ನಿವಾಸಿಯೆಂದು ತಪ್ಪು ವಿಳಾಸವನ್ನು ನೀಡಿ, ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ಕ್ರಿ.ಮಿ.ಸಂ.1283/2023 ಇದಕ್ಕೆ ಸಂಬಂಧಿಸಿದಂತೆ ತನ್ನ ವಾಸಸ್ಥಳ ಕವಿತಾಳ ಹಾ.ವ., ಮುದಗಲ್ ಎಂದು ತಪ್ಪು ಮಾಹಿತಿಯನ್ನು ಮಾನ್ಯ ನ್ಯಾಯಾಲಯಕ್ಕೆ ನೀಡಿರುವದರಿಂದ ಮಧ್ಯಂತರ ಅರ್ಜಿಯ ಅಧಿವಿಚಾರಣೆ ಮಾಡುವದಕ್ಕೆ ಮಾನ್ಯ ನ್ಯಾಯಾಲಯಕ್ಕೆ ಅಧಿಕಾರ ಇರುವದಿಲ್ಲ. ಅರ್ಜಿದಾರಳು ಒಂದೇ ನ್ಯಾಯಾಲಯದಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡೆರಡು ಪರಿಹಾರ ಕೇಳಿರುವದರಿಂದ, ಅರ್ಜಿದಾರಳ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವದಕ್ಕೆ ಯೋಗ್ಯವಾಗಿರುತ್ತದೆ. ಸದರಿ ಅರ್ಜಿದಾರಳು ಬೆಂಗಳೂರು ನಗರದಲ್ಲಿರುವ ವೆಲ್‌ಕೇರ್ ಫೆಸಲಿಟಿ ಇಂಡಿಯನ್ ಪ್ರೈ.ಲಿಂ., 5ಎಸಿ-104, 5ನೇ ಎ ಕ್ರಾಸ್ 3ನೇ ಬ್ಲಾಕ್, ಹೆಚ್.ಆರ್.ಬಿ.ಆರ್. ಲೇಔಟ್, ಕಲ್ಯಾಣಿ ನಗರ, ಭಾರತ ಪೆಟ್ರೋಲ್ ಬಂಕ್ ಹತ್ತಿರದಲ್ಲಿರುವ ವೆಲ್ ಕೇರ್ ಖಾಸಗಿ ಕಂಪನಿಯಲ್ಲಿ ಸೀನಿಯರ್ ಅಸಿಸ್ಟೆಂಟ್ ಎಂದು ದಿನಾಂಕ: 03/07/2023 ರಿಂದ ಕೆಲಸ ಮಾಡುತ್ತಿದ್ದು, ಅದರಿಂದ ಸಾಕಷ್ಟು ಆದಾಯವನ್ನು ಪಡೆಯುತ್ತಿದ್ದಾಳೆ. ಸದರಿ ಅರ್ಜಿದಾರಳು ತನ್ನಷ್ಟಕ್ಕೇ ತಾನೇ ದುಡಿದು ಜೀವನ ನಡೆಸುತ್ತಿರುವದರಿಂದ, ಎದುರುದಾರನು ನಿರುದ್ಯೋಗಿಯಾಗಿರುವದರಿಂದ, ಅರ್ಜಿದಾರಳಿಗೆ ಪ್ರತ್ಯೇಕ

ಜೀವನಾಂಶ ಕೊಡುವ ಸಾಮರ್ಥ್ಯ ಇರುವದಿಲ್ಲ. ಉಳಿದಂತೆ ಅರ್ಜಿದಾರರು ಸಲ್ಲಿಸಿದ ಅರ್ಜಿಯಲ್ಲಿನ ವಿಷಯಗಳನ್ನು ಅಲ್ಲಗಳೆದಿರುತ್ತಾರೆ ಆದ್ದರಿಂದ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಕಿತ್ತು ಹಾಕಬೇಕೆಂದು ಕೇಳಿರುತ್ತಾರೆ.

**4.** ಅರ್ಜಿಯನ್ನು ಸಾಬೀತುಪಡಿಸುವ ದೃಷ್ಟಿಯಿಂದ ಅರ್ಜಿದಾರರು ಅಸಾ-1 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ. ನಿಪಿ-1 ಮತ್ತು ನಿಪಿ-2 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಹಾಗೂ ಅಸಾ.1 ರವರ ಪಾಟೀ ಸವಾಲಿನ ಸಮಯದಲ್ಲಿ ಹಾಜರುಪಡಿಸಿದ ವೆಲ್ ಕೇರ್ ಫೆಸಿಲಿಟಿ ಇಂಡಿಯಾ ಪ್ರೈವೇಂಟ್ ಲಿಮಿಟೇಡ್ ರವರು ಅರ್ಜಿದಾರರಿಗೆ ನೀಡಿದ ಗುರುತಿನ ಚೀಟಿಯನ್ನು ನಿ.ಆರ್.1 ಎಂದು ಗುರುತಿಸಲಾಗಿರುತ್ತದೆ. 1ನೇ ಎದುರುದಾರರು ತಮ್ಮನ್ನು ತಾವು ಎಸಾ.1 ಎಂದು ವಿಚಾರಣೆ ಮಾಡಿಕೊಂಡು ನಿ.ಆರ್.1(ಎ) ರಿಂದ ನಿ.ಆರ್.11 ಎಂದು ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**5.** ಉಭಯ ಪಕ್ಷಕಾರರ ವಕೀಲರು ವಾದವನ್ನು ಕೇಳಲಾಯಿತು. ಅರ್ಜಿಯನ್ನು ಇತ್ಯರ್ಥಪಡಿಸಲು ಅನುಕೂಲವಾಗುವಂತೆ ಈ ಕೆಳಕಂಡ ಅಂಶಗಳನ್ನು ರಚನೆ ಮಾಡಿಕೊಳ್ಳಲಾಗಿದೆ.

1. ಅರ್ಜಿದಾರರು ತಾವು ಅರ್ಜಿಯಲ್ಲಿ ಕೇಳಿದ ಹಾಗೆ, ಎದುರುದಾರರಿಂದ ಕೌಟುಂಬಿಕ ಕಲಹಗಳಿಂದ ಮಹಿಳೆಯ ರಕ್ಷಣೆ ಕಾಯ್ದೆಯ ಕಲಂ.18 ರಡಿ ರಕ್ಷಣಾ ಆದೇಶವನ್ನು ಪಡೆಯಲು ಅರ್ಹರಿದ್ದಾರೆಯೇ?
2. ಅರ್ಜಿದಾರರು ತಾವು ಅರ್ಜಿಯಲ್ಲಿ ಕೇಳಿದ ಹಾಗೆ, ಎದುರುದಾರರಿಂದ ಕೌಟುಂಬಿಕ ಕಲಹಗಳಿಂದ ಮಹಿಳೆಯ ರಕ್ಷಣೆ ಕಾಯ್ದೆಯ ಕಲಂ.19 ರಡಿ ವಾಸಕ್ಕಾಗಿ ಪ್ರತ್ಯೇಕ ಮನೆ ಪಡೆಯಲು ಅರ್ಹರಿದ್ದಾರೆಯೇ?
3. ಅರ್ಜಿದಾರರು ತಾವು ಅರ್ಜಿಯಲ್ಲಿ ಕೇಳಿದ ಹಾಗೆ, ಎದುರುದಾರರಿಂದ ಕೌಟುಂಬಿಕ ಕಲಹಗಳಿಂದ ಮಹಿಳೆಯ ರಕ್ಷಣೆ ಕಾಯ್ದೆಯ ಕಲಂ.20 ರಡಿ ಅರ್ಜಿದಾರರ ಉಪ ಜೀವನಕ್ಕಾಗಿ ಮಾಸಿಕ ರೂ.10,000/- ಗಳ ಜೀವನಾಂಶ ಪಡೆಯಲು ಅರ್ಹರಿದ್ದಾರೆಯೇ?
4. ಏನು ಆದೇಶ ?

**6. ಮೇಲಿನ ಅಂಶಗಳನ್ನು ಈ ರೀತಿಯಾಗಿ ಉತ್ತರಿಸಲಾಗಿದೆಃ**

| | | |
|---|---|---|
| ಅಂಶ 1 ಮತ್ತು 2 | : | **ನಕಾರಾತ್ಮಕವಾಗಿ,** |
| ಅಂಶ 3 | : | **ಭಾಗಶಃ ಸಕಾರಾತ್ಮಕವಾಗಿ,** |
| ಅಂಶ 4 | : | ಅಂತಿಮ ಆದೇಶದಂತೆ, ಮುಂದೆ ಚರ್ಚೆ ಮಾಡಿರುವ ಕಾರಣಗಳಿಗಾಗಿ |

**<u>ಕಾರಣಗಳು</u>**

**7.** **<u>ಅಂಶಃ 1 ರಿಂದ 3</u>** ಕೌಟುಂಬಿಕ ಕಲಹಗಳಿಂದ ಮಹಿಳೆಯ ರಕ್ಷಣೆ ಅಧಿನಿಯಮ 2005 ರ ಕಲಂ 12ರ ರೀತಿಯ ಅರ್ಜಿಯನ್ನು ಸಲ್ಲಿಸಿ, ಕಲಂ 18 ರಡಿಯಲ್ಲಿ ರಕ್ಷಣ ಅದೇಶ, ಕಲಂ 19 ರಡಿಯಲ್ಲಿ ಅರ್ಜಿದಾರಿರರಿಗೆ ಪ್ರತ್ಯೇಕ ವಾಸ ಮನೆ ಕಲ್ಪಿಸಿ ಕೊಡುವಂತೆ ಮತ್ತು ಕಲಂ.20 ರಡಿಯಲ್ಲಿ ಅರ್ಜಿದಾರರಿಗೆ ಮಾಸಿಕ ತಲಾ 10,000/- ರೂಗಳಂತೆ ಜೀವನಾಂಶವನ್ನು ತುಂಬಿಕೊಡಲು, ಎದುರುದಾರರಿಗೆ ಆದೇಶ ಮಾಡಬೇಕೆಂದು ಕೋರಿರುತ್ತಾರೆ.

**8.** ಅರ್ಜಿದಾರರು ತಮಗೆ ಕೌಟುಂಬಿಕ ಕಲಹಗಳಿಂದ ಆದ ದೌರ್ಜನ್ಯ ದ ಬಗ್ಗೆ ಕಲಂ.12 ರಡಿ ಹೇಳಿದಂತೆ ರಕ್ಷಣಾಧಿಕಾರಿ ಅಥವಾ ಅವರ ಕಛೇರಿಗೆ ದೂರು ಕೊಟ್ಟ ಬಗ್ಗೆ ಯಾವುದೇ ಸಾಕ್ಷ್ಯಧಾರಗಳನ್ನು ಒದಗಿಸಿರುವುದಿಲ್ಲ ಸದರ ಪರಿಹಾರಗಳನ್ನು ನೀಡಲು ರಕ್ಷಣಾಧಿಕಾರಿಯ ವರದಿಯ ಅವಶ್ಯಕತೆ ಇರುತ್ತದೆ. ಹೀಗಿರುವಾಗ ದೌರ್ಜನ್ಯ ಆದ ಬಗ್ಗೆ ಅನುಮಾನ ಉಂಟಾಗುತ್ತದೆ. ರಕ್ಷಣಾಧಿಕಾರಿಯ ವರದಿಯನ್ನು ಹಾಜರು ಪಡಿಸದ ಪ್ರಯುಕ್ತ ಸದರ ಪರಿಹಾರಗಳನ್ನು ನೀಡಲು ಬರುವುದಿಲ್ಲ ಎಂದು ಅರ್ಜಿದಾರರ ವಿನಂತಿಗಳನ್ನು ತಳ್ಳಿಹಾಕಲಾಗಿದೆ. ಆದರೆ ಕಲಂ.20 ರಡಿಯಲ್ಲಿ ಉಪ ಜೀವನಕ್ಕಾಗಿ ಜೀವನಾಂಶ ಕೇಳಿರುವುದರಿಂದ ಪಕ್ಷಗಾರರ ಸಾಕ್ಷ್ಯವನ್ನು ಮತ್ತು 1ನೇ ಎದುರುದಾರನ ಆದಾಯವನ್ನು ಪರಿಗಣಿಸಿ ನಿರ್ಣಯಿಸಬೇಕಾಗಿರುವುದರಿಂದ ಈ ಮುಂದಿನ ಭಾಗದಲ್ಲಿ ಚರ್ಚಿಸಲು ತಿರ್ಮಾನಿಸಲಾಗಿದೆ.

**9.** ಅರ್ಜಿದಾರರು ತಮ್ಮ ಅರ್ಜಿಯಲ್ಲಿನ ಅಂಶಗಳನ್ನು ರುಜುವಾತು ಪಡಿಸಲು ಸಾಕ್ಷ್ಯ ಪೆಟ್ಟಿಗೆಗೆ ಹಾಜರಾಗಿ ತಮ್ಮ ಪರವಾಗಿ ಸಾಕ್ಷ್ಯವನ್ನು ನುಡಿದಿದ್ದು, ತಮ್ಮ ಸಾಕ್ಷ್ಯದಲ್ಲಿ ತಾವು 1ನೇ ಎದುರುದಾರನಿಗೆ ಮದುವೆಯ ಸಮಯದಲ್ಲಿ ರೂ.50,000/- ನಗದು, 1 ತೂಲೆ ಬಂಗಾರ ವರನ ಬಟ್ಟೆಗಳಿಗಾಗಿ

ರೂ. 10,000/- ಹಾಗೂ ಗೃಹ ಬಳಕೆಯ ಎಲ್ಲಾ ಸಾಮಾನುಗಳನ್ನು ರೂ.2,00,000/- ಖರ್ಚು ಮಾಡಿ ಮದುವೆಮಾಡಿರುತ್ತೇವೆಂದು ಹಾಗೂ ನಂತರ ರೂ.5,00,000/- ವರದಕ್ಷಣೆಗಾಗಿ ಪೀಡಿಸಿರುತ್ತಾರೆ ಎಂದು ಹೇಳಿರುತ್ತಾರೆ ಅಲ್ಲದೇ 1ನೇ ಎದುರುದಾರರು ಚಾಲಕನಿದ್ದು ಮತ್ತು ವ್ಯಾಪಾರಿ ಇದ್ದು ಅದರಿಂದ ಮಾಸಿಕ ರೂ. 50,000 ಗಳಿಗಿಂತಲೂ ಹೆಚ್ಚಿನ ಆದಾಯ ಬರುತ್ತದೆಂದು ನುಡಿದಿರುತ್ತಾರೆ. ಮುಂದುವರೆದು ಸ್ಥಿರಾಸ್ತಿ ಮತ್ತು ಚರಾಸ್ತಿಗಳಿಂದ ರೂ.10,00,000/- ವಾರ್ಷಿಕ ಆದಾಯ ರೂ.10,00,000/- ಬರುತ್ತೆಂದು ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಈ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ ತಮ್ಮ ಪಾಟೀ ಸವಾಲಿನಲ್ಲಿ ತಾವು ಬೆಂಗಳೂರಿನ ವೆಲ್ ಕೇರ್ ಫೆಸಿಲಿಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಸದರ ಒಪ್ಪಿಕೊಂಡ ಭಾಗವೂ ಅರ್ಜಿದಾರರು ಈ ಅರ್ಜಿ ಸಲ್ಲಿಸುವುದಕ್ಕಿಂತ ಮೊದಲು ಸದರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಸೂಚಿಸುತ್ತದೆ ಅಲ್ಲದೇ ಸದರ ಕಂಪನಿಯ ಗುರುತಿನ ಚೀಟಿಯನ್ನು ತಮ್ಮದೇ ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೇ 1ನೇ ಎದುರುದಾರನು ಆದಾಯ ಹೊಂದಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಮತ್ತು ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಹೊಂದಿದ ಬಗ್ಗೆ ಯಾವುದೇ ದಾಖಲೆಗಳನ್ನು ಈ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವುದಿಲ್ಲ ಅದಲ್ಲದೇ ತಾವು ಜೀವನಾಂಶಕ್ಕಾಗಿ ಇನ್ನೊಂದು ಅರ್ಜಿ ಸಲ್ಲಿಸಿದ ಬಗ್ಗೆ ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಹೀಗಾಗಿ ಅರ್ಜಿದಾರರು ತಾವು ಕೇಳಿದ ನಷ್ಟದ ಪರಿಹಾರವನ್ನು, ಸಂರಕ್ಷಣಾ ಆದೇಶ, ವಾಸದ ಮನೆಯ ಆದೇಶ ಮತ್ತು ಇತರೆ ಖರ್ಚುಗಳ ಪರಿಹಾರಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

**10.** ಅರ್ಜಿದಾರರು ಹಾಜರುಪಡಿಸಿದ ನಿಪಿ-1 ಮತ್ತು 2 ಇವುಗಳು ಅರ್ಜಿದಾರರ ಮತ್ತು 1ನೇ ಎದುರುದಾರರ ಮದುವೆಗೆ ಸಂಬಂಧಿಸಿದ ದಾಖಲೆಗಳಿದ್ದು, ಎದುರುದಾರರು ಮದುವೆಯಾದ ಬಗ್ಗೆ ಅಲ್ಲಗಳೆದಿರುವುದಿಲ್ಲ ಅದ್ದರಿಂದ ಸದರ ದಾಖಲೆಗಳ ಬಗ್ಗೆ ಚರ್ಚಿಸುವ ಅವಶ್ಯಕತೆ ಇರುವುದಿಲ್ಲ.

**11.** ನಿ.ಆರ್.1 ಅರ್ಜಿದಾರರು ವೇಲ್ ಕೇರ್ ಫೆಸಿಲಿಟಿ ಕಂಪನಿಯಲ್ಲಿ ಅರ್ಜಿ ದಾಖಲಿಸುವುದಕ್ಕಿಂತ ಮುಂಚೆ ಕೆಲಸ ಮಾಡುತ್ತಿದ್ದ ಬಗ್ಗೆ ಗುರುತಿನ ಚೀಟಿ ಇದ್ದು ಅದನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ನಿ.ಆರ್.1 (ಎ) ರಿಂದ ನಿ.ಆರ್.4 ಇವುಗಳನು ಪ್ರಥಮ ವರ್ತಮಾನ ವರದಿ, ಪಿರ್ಯಾದಿಯ ಹೇಳಿಕೆ, ಮುಂದುವರೆದ ಹೇಳಿಕೆ, ದೂರಿನ ಪ್ರತಿಗಳಗಿದ್ದು, ಸದರು ದಾಖಲೆಗಳು ಈ ಮೇಲೆ ಚರ್ಚಿಸಿದಂತೆ ರಕ್ಷಣಾಧಿಕಾರಿಯ ವರದಿ ಇಲ್ಲದ ಕಾರಣ ಗಣನೆಗೆ ತೆಗೆದುಕೊಳ್ಳುಲು ಸೂಕ್ತವಲ್ಲವೆಂದು ಬಾವಿಸಲಾಗಿದೆ ನಿ.ಆರ್.5 ರಿಂದ 11 ದಾಖಲೆಗಳು ಛಾಯಾ ಚಿತ್ರಗಳು, ವಾಟ್ಸಪ್ ಸಂದೇಶಗಳು ಮತ್ತು ಅವುಗಳನ್ನು ಒಳಗೊಂಡ ಸಿ.ಡಿ ಇದ್ದು ಪ್ರಸ್ತುತ ಅರ್ಜಿಯು ಜೀವನಾಂಶ ಪಡೆಯುವುದಕ್ಕೆ ಸಂಬಂಧಪಟ್ಟಿರುವುದರಿಂದ ಮತ್ತು ಸದರ ದಾಖಲೆಗಳು ಅರ್ಜಿದಾರರು ಅನೈತಿಕ ಸಂಬಂಧ ಹೊಂದಿರುವ ಬಗ್ಗೆ ನಿರ್ಣಾಯಕ ರುಜುವಾತು ಪಡಿಸುವಲ್ಲಿ ಸಹಾಯವಾಗುವುಲ್ಲ ಎಂದು ಭಾವಿಸಿ ಮತ್ತು ಎದುರುದಾರರು ತಮ್ಮ ತಕರಾರಿನಲ್ಲಿ, ಅರ್ಜಿದಾರರು ಯಾರೊಂದಿಗೆ ಅನೈತಿಕ ಸಂಬಂಧ ಹೊಂದಿರುತ್ತಾರೆಂದು ನಿಖರವಾಗಿ ಹೇಳಿರುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ವಿಷಯವನ್ನು ತಮ್ಮ ತಕರಾರಿನಲ್ಲಿ ಕಾಣಿಸಿರುವುದಿಲ್ಲ ಹೀಗಿರುವಾಗ ಸದರ ದಾಖಲೆಗಳ ಬಗ್ಗೆ ಚರ್ಚಿಸುವುದು ಅನಗ್ಯವೆಂದು ಭಾವಿಸಲಾಗಿದೆ.

**12.** ಇನ್ನೂಳಿದಂತೆ ಅರ್ಜಿದಾರರ ಜೀವನಾಂಶಕ್ಕೆ ಸಂಬಂಧಪಟ್ಟಂತೆ, ಅರ್ಜಿದಾರರು ಸದ್ಯ ಕೆಲಸ ಮಾಡದೇ ಇರುವ ಕಾರಣ ಮತ್ತು ಎದುರುದಾರನು ಅರ್ಜಿದಾರರ ಪತಿಯಾಗಿದ್ದು, ಸದರರವನ್ನು ನೋಡಿಕೊಳ್ಳುವ ಜವಾಬ್ದಾರಿ ಇರುವುದರಿಂದ ಮತ್ತು ತಮಗೆ ಯಾವುದೇ ಆದಾಯ ಇಲ್ಲದೇ ಇದ್ದರೂ ಕೂಡಾ ತಮ್ಮ ದುಡಿಮೆಯ ಆದಾಯದಿಂದ ಬಂದ ಸಂಪಾದನೆಯಲ್ಲಿ ನೋಡಿಕೊಳ್ಳಬೇಕಾಗುತ್ತದೆ. ಅದ್ದರಿಂದ 1ನೇ ಎದುರುದಾರನು ಅರ್ಜಿದಾರರಿಗೆ ಜೀವನಾಂಶ ನೀಡಲು ಭಾದ್ಯಸ್ತರಾಗಿರುತ್ತಾರೆ. ಆದಾಯಕ್ಕೆ ಸಂಬಂಧಪಟ್ಟಂತೆ 1ನೇ ಎದುರುದಾರನು ಕನಿಷ್ಟ ವೇತನ ಕಾಯ್ದೆಯಡಿ ರೂ.450 ರಿಂದ 650 ರವರೆಗೆ ಪ್ರತೀ ದಿನ ಸಂಪಾದಿಸಬಹುದು ಎಂಬ ಊಹೇಗೆ ಬರಲಾಗಿದೆ ಅದ್ದರಿಂದ 1ನೇ ಎದುರುದಾರನು ಮಾಸಿಕ ಅಂದಾಜು ರೂ.13,500 ರಿಂದ 19,500 ಹಣವನ್ನು ಸಂಪಾದಿಸುತ್ತಾನೆಂದು ತಿರ್ಮಾನಕ್ಕೆ ಬರಲಾಗಿದೆ. ಸದರಿ ಸಂಪಾದನೆಯಲ್ಲಿ ಎದುರುದಾರನು ತನ್ನ ಹಾಗೂ ತನ್ನ ತಾಯಿ 2ನೇ ಎದುರುದಾರಳ ದೈನಂದಿನ ಖರ್ಚು ವೆಚ್ಚಗಳು, ಚಿಕಿತ್ಸೆ ಹಾಗೂ ಇನ್ನಿತರ ಖರ್ಚುಗಳನ್ನು

ಗಮನದಲ್ಲಿಟ್ಟುಕೊಂಡು ಅರ್ಜಿದಾರಳು ಎದುರುದಾರನಿಂದ ಪ್ರತೀ ತಿಂಗಳು ರೂ.2,500/- ರಂತೆ ಆಹಾರ, ಬಟ್ಟೆ, ಗೃಹ ಕೃತ್ಯದ ಖರ್ಚುಗಳನ್ನು ಪಡೆಯಲು ಅರ್ಹಳಿರುತ್ತಾಳೆಂದು ತೀರ್ಮಾನಕ್ಕೆ ಬರಲಾಗಿದೆ. **1 ಮತ್ತು 2ನೇ ಅಂಶಗಳನ್ನು ನಕಾರಾತ್ಮಕವಾಗಿ ಹಾಗೂ 3 ನೇ ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**13.** **ಅಂಶಃ 4ನೇ** ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನಂತೆ ಆದೇಶ ಮಾಡಲಾಗಿದೆ.

**ಆದೇಶ**

**ಕೌಟುಂಬಿಕ ಹಿಂಸೆಯಿಂದ ಮಹಿಳೆಯ ಸಂರಕ್ಷಣಾ ಅಧಿನಿಯಮ ಕಲಂ 12ರ ಅಡಿಯಲ್ಲಿ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಮತ್ತು ಅರ್ಜಿಯಲ್ಲಿ ವಿನಂತಿಸಲಾದ ಇತರೆ ಪರಿಹಾರಗಳನ್ನು ತಿರಸ್ಕರಿಸಲಾಗಿದೆ.**

**ಅರ್ಜಿದಾರಳು ತನ್ನ ದೈನಂದಿನ ಖರ್ಚು ವೆಚ್ಚಗಳಿಗಾಗಿ ಪ್ರತೀ ತಿಂಗಳು ರೂ.2,500/- ಗಳಂತೆ ಜೀವನಾಂಶವನ್ನು ಪಡೆಯಲು ಅರ್ಹಳಾಗಿರುತ್ತಾಳೆ.**

**ಅರ್ಜಿದಾರಳು ತಾನು ಅರ್ಜಿ ದಾಖಲಿಸಿದಾಗಿನಿಂದ ಈ ಮೇಲೆ ಹೇಳಿದ ಜೀವನಾಂಶವನ್ನು ಪಡೆಯಲು ಅರ್ಹಳಾಗಿರುತ್ತಾಳೆ.**

(ಶೀಘ್ರಲಿಪಿಗಾರರಿಗೆ ಉಕ್ತಲೇಖಿಸಿ ತರ್ಜುವೆ ಮಾಡಿ ಗಣಕೀಕರಿಸಿದ ನಂತರ ಓದಿ ತಿದ್ದಿ ತದನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ **25ನೇ ಜೂನ್ 2026** ರಂದು ಘೋಷಿಸಲಾಗಿದೆ)

**Sd/-**
**(ಸಿದ್ರಾಮ ರೆಡ್ಡಿ)**
**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಲಿಂಗಸುಗೂರು.**

**//ಅನುಬಂಧ//**

**ಅರ್ಜಿದಾರರ ಪರ ವಿಚಾರಣೆ ಮಾಡಿಕೊಂಡಿರುವ ಸಾಕ್ಷಿದಾರರ ಪಟ್ಟಿಃ**

ಪ್ರಾಸಾ.1 : ರಾಜಾಬೀ.

**<u>ಎದುರುದಾರರ ಪರ ವಿಚಾರಣೆ ಮಾಡಿಕೊಂಡಿರುವ ಸಾಕ್ಷಿ ದಾರರ ಪಟ್ಟಿ:</u>**

ಎಸಾ.1 : ಮುಬಾರಕ್ ಕಡ್ಲಿಮಟ್ಟಿ.

**<u>ಅರ್ಜಿದಾರರ ಪರ ಗುರುತಿಸಿಕೊಂಡಿರುವ ದಾಖಲೆಗಳ ಪಟ್ಟಿ:</u>**

| | | |
|---|---|---|
| ನಿಪಿ.1 | : | ಮದುವೆ ಪ್ರಮಾಣ ಪತ್ರ ನೋಟರಿ. |
| ನಿಪಿ.2 | : | ಮದುವೆ ಆಮಂತ್ರಣ ಪತ್ರಿಕೆ. |

**<u>ಎದುರುದಾರರ ಪರ ಗುರುತಿಸಿಕೊಂಡಿರುವ ದಾಖಲೆಗಳ ಪಟ್ಟಿ:</u>**

| | | |
|---|---|---|
| ನಿ.ಆರ್.1 | : | ಐಡಿ ಕಾರ್ಡ್. |
| ನಿ.ಆರ್.1(ಎ) | : | ಎಫ್.ಐ.ಆರ್. |
| ನಿ.ಆರ್.2 &3 | : | ಹೇಳಿಕೆಗಳು. |
| ನಿ.ಆರ್.4 | : | ಭದ್ರವತಿ ಠಾಣೆಗೆ ನೀಡಿದ ದೂರಿನ ಪತ್ರ. |
| ನಿ.ಆರ್.5 ರಿಂದ 10 | : | ಫೋಟೋಗಳು. |
| ನಿ.ಆರ್.11 | : | ಸಿ.ಡಿ. |

**Sd/-**

**(ಸಿದ್ರಾಮ ರೆಡ್ಡಿ)**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ ಲಿಂಗಸುಗೂರು.**